ಕರ್ನಾಟಕ ವಿಧಾನಸಭೆ

ಗುರುವಾರ 15ನೇ ಫೆಬ್ರವರಿ 2007 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ: ಎನ್.ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಧರಣಿ

ಸದನವು ಬೆಳಿಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

(ಅಧ್ಯಕ್ಷರ ಪೀಠದಲ್ಲಿ **ಸನ್ಮಾನ್ಯ ಉಪಾಧ್ಯಕ್ಷರು** ಉಪಸ್ಥಿತರಿದ್ದರು)

(ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿ ಮಾಡಲು ಸದನದ ಬಾವಿಗಿಳಿದು ಸರ್ಕಾರಕ್ಕೆ ಧಿಕ್ಕಾರ ಎಂದು ಘೋಷಣೆ ಕೂಗುತ್ತಿದ್ದರು)

ಉಪಾಧ್ಯಕ್ಷರು: ಈಗ ಪ್ರಶ್ನೋತ್ತರ, ಮಾನ್ಯ ವಾಟಾಳ್‌ನಾಗರಾಜ್‌ರವರು

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ವಿಷಪೂರಿತ ಹಾವುಗಳ ಔಷಧಿ ಬಗ್ಗೆ –

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನೀವು ಯಾವುದಕ್ಕೆ ಪ್ರಭಟನೆ ಮಾಡುತ್ತೀರಿ ಎಂದು ಕನಿಷ್ಠ ಸೌಜನ್ಯಕ್ಕೆ ನಮಗೆ ಹೇಳಿಲ್ಲ. ವಿರೋಧ ಪಕ್ಷದ ನಾಯಕರು ನಮ್ಮನ್ನೇನಾದರೂ ಸೌಜನ್ಯಕ್ಕಾದರೂ ಕರೆದು ಮಾತನಾಡಿದಿರಾ? ಏನು ನೀವು ಇಲ್ಲಿ ಬಂದು ಬಹಿರಂಗವಾಗಿ ದಾಳಿ ಮಾಡುತ್ತಿದ್ದೀರಲ್ಲಾ? ಹೇಳಿ. ಯಾವತ್ತು ಕರೆದಿರಿ, ಅದು ಬೇರೆ ವಿಚಾರ, ನೀವು ನಮ್ಮನ್ನು ಕರೆದು ಮಾತನಾಡಿದಿರಾ? ಏನು ನನಗೆ ಅರ್ಥವಾಗಲಿಲ್ಲ. ನೀವು ನಮ್ಮನ್ನು ಕರೆದಿರಾ? ಇಲ್ಲಿ ನಮ್ಮನ್ನು ಮಡಿವಂತಿಕೆ ಮಾಡುತ್ತಿದ್ದೀರಿ.

(ಗೊಂದಲ)

(ಕಾಂಗ್ರೆಸ್ ಪಕ್ಷದ ಸದಸ್ಯರ ಧರಣಿ ಮುಂದುವರೆದು ರಾಜ್ಯ ಸರ್ಕಾರಕ್ಕೆ ಧಿಕ್ಕಾರ ಎಂದು ಘೋಷಣೆ ಕೂಗುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್: ಏನು ವಿರೋಧ ಪಕ್ಷದ ನಾಯಕರು ನಮ್ಮನ್ನು ಕರೆದು ಬನ್ನಿ ನೀವು ಮಾತನಾಡೋಣ ಎಂದು ಕೇಳುವುದಿಲ್ಲ, ನಮ್ಮನ್ನು ಒಂದು ರೀತಿಯ ಮೈಲಿಗೆ ರೀತಿ ನೋಡುತ್ತಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು: ಈಗ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಾನೂನು ಸಚಿವರು ಕೌನ್ಸಿಲ್‌ನಲ್ಲಿದ್ದು ಅರ್ಧಗಂಟೆಯಲ್ಲಿ ಇಲ್ಲಿಗೆ ಬರುವುದಾಗಿ ತಿಳಿಸಿದ್ದಾರೆ. ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಉಪಾಧ್ಯಕ್ಷರು: ಈಗ ಅರ್ಧಗಂಟೆ ಕಾಲ ಸದನವನ್ನು ಮುಂದೂಡಲಾಗಿದೆ.

(ಸದನವು ಬೆಳಿಗ್ಗೆ 10.42 ಗಂಟೆಗೆ ಮುಂದೂಡಿ ಪುನಃ ಅರ್ಧಗಂಟೆ ಸಮಯದ ನಂತರ ಪುನಃ ಸೇರುವುದಾಗಿ ನಿರ್ಣಯಿಸಿತು)

(ಸದನವು ಮತ್ತೆ ಮಧ್ಯಾಹ್ನ 12 ಗಂಟೆ 10 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು ಅಧ್ಯಕ್ಷ ಪೀಠದಲ್ಲಿ ಉಪಾಧ್ಯಕ್ಷರಾದ ಶ್ರೀ ಎನ್.ವೈ.ಗೋಪಾಲಕೃಷ್ಣರವರು ಉಪಸ್ಥಿತರಿದ್ದರು.)

(ಸದನದ ಬಾವಿಯಲ್ಲಿ ಕಾಂಗ್ರೆಸ್ ಸದಸ್ಯರುಗಳು ತಮ್ಮ ಧರಣಿಯನ್ನು ಮುಂದುವರೆಸಿದ್ದರು)

ಉಪಾಧ್ಯಕ್ಷರು: ಧರಣಿನಿರತ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗುತ್ತೀರಾ? ಈಗ ಸದನವನ್ನು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 12.10 ಕ್ಕೆ ಸಮಾವೇಶಗೊಂಡು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಪುನರ್ ಸಮಾವೇಶಗೊಳ್ಳುವಂತೆ ಸದನವನ್ನು ಮುಂದೂಡಲಾಯಿತು)

(ಸದನವು ಪುನಃ 4 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು)

(ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)

ಉಪಾಧ್ಯಕ್ಷರು: ಧರಣಿ ನಿರತ ಸದಸ್ಯರು ಈಗಲಾದರೂ ನಿಮ್ಮ ಸ್ಥಾನಕ್ಕೆ ಹೋಗುತ್ತೀರಾ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಅವರು ಈ ಜನ್ಮದಲ್ಲಿ ಕುರ್ಚಿಗೆ ಬರುವುದಿಲ್ಲ.

ಉಪಾಧ್ಯಕ್ಷರು: ಎಲ್ಲರೂ ನಿಮ್ಮ ನಿಮ್ಮ ಸೀಟ್‌ನಲ್ಲಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ ಅವರು ಕುಳಿತುಕೊಳ್ಳುವುದಿಲ್ಲ ಬಿಡಿ.

ಉಪಾಧ್ಯಕ್ಷರು: ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನ ಸಂಜೆ 4 ಗಂಟೆ 17 ನಿಮಿಷಕ್ಕೆ ಮುಂದೂಡಲ್ಪಟ್ಟು ನಾಳೆ ದಿನಾಂಕ: 19ನೇ ಫೆಬ್ರವರಿ 2007 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)